# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ ವಾರ್ಡ್ ಸಮಿತಿ/ಸಹಾಯಕ ಇಂಜಿನಿಯರ್‌ರವರ ಕಛೇರಿ, ಸಿದ್ದಾಪುರ ವಾರ್ಡ್-144, ಟಿ. ಮರಿಯಪ್ಪ ರಸ್ತೆ, ಬಯಲು ರಂಗ ಮಂದಿರದ ಹತ್ತಿರ, ವೆಂಕಟರೆಡ್ಡಿನಗರ ಬೆಂಗಳೂರು

ದಿನಾಂಕ:02-06-2022

## -: ಸಭೆ ತಿಳುವಳಿಕೆ ಪತ್ರ :-

**ವಿಷಯ:** ದಿನಾಂಕ:04-06-2022 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.
**ಉಲ್ಲೇಖ:** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಪತ್ರ ಸಂಖ್ಯೆ: ಬಿ12(5) /ಪಿಆರ್/35/2020-21, ದಿನಾಂಕ:21-09-2020.

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿದ್ದಾಪುರ ವಾರ್ಡ್ ಸಂಖ್ಯೆ: 144ರ ವಾರ್ಡ್ ಸಮಿತಿಯ ಸಭೆಯನ್ನು **ಶ್ರೀ. ನರಸರಾಮರಾವ್,** ಮುಖ್ಯ ಅಭಿಯಂತರರು (ದಕ್ಷಿಣ ವಲಯ) ಬಿಬಿಎಂಪಿ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಪ್ಪಣೆ ಮೇರೆಗೆ ದಿನಾಂಕ:04-06-2022 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ಕರೆಯಲಾಗಿದೆ ಹಾಗೂ ವಾರ್ಡ್ ಕಮಿಟಿಯ ಸಭೆಯನ್ನು **ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಸಂಖ್ಯೆ-144ರ ವಾರ್ಡ್ ಕಛೇರಿ ಸಭಾಂಗಣದಲ್ಲಿ** ನಡೆಸಲು ಏರ್ಪಡಿಸಲಾಗಿದೆ. ಆದ ಪ್ರಯುಕ್ತ ವಾರ್ಡ್ ಕಮಿಟಿ ಅದಿಕಾರಿಗಳು (ಸದಸ್ಯರು) ಹಾಗೂ ವಾರ್ಡಿನ ಸಾರ್ವಜನಿಕ ಕುಂದು ಕೊರತೆಯ ಸಂಘ ಸಂಸ್ಥೆಯ ಪದಾದಿಕಾರಿಗಳು ದಯವಿಟ್ಟು ಸಭೆಗೆ ತಪ್ಪದೆ ಹಾಜರಾಗಿ, ವಾರ್ಡ್ ಅಭಿವೃದ್ಧಿ ಹಾಗೂ ಕುಂದು ಕೊರತೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯ: 1) ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ 2) ವಾರ್ಡಿನ ಘನತ್ಯಾಜ್ಯಗಳ ಸಂಬಂಧಿಸಿದ ವಿಷಯಗಳು 3) BWSSB, BESCOM, & POLICE ಇಲಾಖೆಯ ವಿಷಯಗಳು 4) ಪಾಲಿಕೆಯ ಅರಣ್ಯ, ವಿದ್ಯುತ್, ಬೃಹತ್ ಮಳೆನೀರು ಕಾಲುವೆ ಹಾಗೂ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು 5) ಪಾಲಿಕೆಯ ಕಂದಾಯ ಮತ್ತು ಆರೋಗ್ಯ ಇಲಾಖೆಯ ವಿಷಯಗಳು ಹಾಗೂ 6) ಸಾರ್ವಜನಿಕರ ಇತರೆ ಕುಂದು ಕೊರತೆಗಳ ಬಗ್ಗೆ ಇತ್ಯಾದಿ..

(ಸಹಿ) 02/06/2022
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ: 144

<u>ಪ್ರತಿಯನ್ನು:</u>

1. **ಶ್ರೀ. ನರಸರಾಮರಾವ್,** ಮುಖ್ಯ ಅಭಿಯಂತರರು (ದಕ್ಷಿಣ) ಬಿಬಿಎಂಪಿ ನೋಡಲ್ ಅಧಿಕಾರಿ, ಮಾನ್ಯ ಅಧ್ಯಕ್ಷರು, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. **ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ವಿದ್ಯುತ್ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರ ದೂರು ತುಂಬಾ ಇರುವುದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.**
4. **ಕಾರ್ಯಪಾಲಕ ಅಭಿಯಂತರರು (ಬೃಹತ್ ಮಳೆನೀರು ಕಾಲುವೆ) ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಮಳೆನೀರು ಕಾಲುವೆ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರ ದೂರು ತುಂಬಾ ಇರುವುದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.**
5. ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-4) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕರು ತೋಟಗಾರಿಕೆ ಇಲಾಖೆ (ದಕ್ಷಿಣ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊಂಬೇಗೌಡನಗರ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸ.ಕಾ.ನಿ. ಅಭಿಯಂತರರು, ಚಿಕ್ಕಪೇಟೆ ವಿಭಾಗ ಘನತ್ಯಾಜ್ಯ ನಿರ್ವಹಣೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9. ಉಪ ಆರೋಗ್ಯಾಧಿಕಾರಿ (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹ ಕಂದಾಯ ಅಧಿಕಾರಿ, ಹೊಂಬೇಗೌಡನಗರ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.

Scanned with CamScanner

11. ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದಾಪುರ ಪೊಲೀಸ್ ಠಾಣೆ ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಸಮಸ್ಯೆಗಳ ಬಗ್ಗೆ, ಹಾಗೂ ವಾರ್ಡಿನ ಸಭೆಗಳನ್ನು, ಸಾರ್ವಜನಿಕರು ತಮ್ಮ ತಮ್ಮ ವೈಯಕ್ತಿಕ ವಿಚಾರಗಳು ಹಾಗೂ ರಾಜಕೀಯ ವಿಚಾರಗಳನ್ನು ಮಾತನಾಡಿ ಸಭೆಗೆ ಅಡ್ಡಿಯನ್ನುಂಟು ಮಾಡುತ್ತಿರುವುದರಿಂದ ಇಂತಹ ವಿಷಯಗಳನ್ನು ಸಭೆಯಲ್ಲಿ ಚರ್ಚಿಸದಂತೆ ಸಾರ್ವಜನಿಕರಿಗೆ ನಿರ್ದೇಶನ ನೀಡಲು ಹಾಗೂ ಕಾನೂನು ಕ್ರಮ ವಹಿಸಲು ಸಂಬಂಧಪಟ್ಟ ಪೊಲೀಸ್ ಸಿಬ್ಬಂದಿಯವರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.

12. ಕಾರ್ಯಪಾಲಕ ಅಭಿಯಂತರರು, BWSSB ಇಲಾಖೆ ಬೆಂಗಳೂರು ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ನೀರು ಮತ್ತು ಒಳಚರಂಡಿ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರು ಪ್ರತಿ ಸಭೆಗಳಲ್ಲಿ ದೂರನ್ನು ಚರ್ಚಿಸುವ ಸಂದರ್ಭದಲ್ಲಿ ತಮ್ಮ ಇಲಾಖೆಯ ಸಿಬ್ಬಂದಿ ವರ್ಗದವರು ಸುಮಾರು ಸಭೆಗಳಲ್ಲಿ ಹಾಜರಿಲ್ಲದೇ ತೊಂದರೆಯಾಗಿರುತ್ತದೆ. ಅದ್ದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.

13. ಕಾರ್ಯಪಾಲಕ ಅಭಿಯಂತರರು, BESCOM ಇಲಾಖೆ ಬೆಂಗಳೂರು ರವರಿಗೆ ಸಲ್ಲಿಸುತ್ತಾ, ವಿದ್ಯುತ್ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರು ಪ್ರತಿ ಸಭೆಗಳಲ್ಲಿ ದೂರನ್ನು ಚರ್ಚಿಸುವ ಸಂದರ್ಭದಲ್ಲಿ ತಮ್ಮ ಇಲಾಖೆಯ ಸಿಬ್ಬಂದಿ ವರ್ಗದವರು ಸುಮಾರು ಸಭೆಗಳಲ್ಲಿ ಹಾಜರಿಲ್ಲದೇ ತೊಂದರೆಯಾಗಿರುತ್ತದೆ. ಅದ್ದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.

Scanned with CamScanner